


### ಸಂಗ್ರಹಯೋಗ್ಯ ಸಂಚಿಕೆ

'ಸುಧಾ' ಫೆ.14ರ ಸಂಚಿಕೆಯ ಮುಖಪುಟ ಲೇಖನ 'ವಾಹ್! ವಿಜಾಪುರ' ಗಣೇಶ ಚಂದನಶಿವ ಅವರ ವಿವರವಾದ ಮಾಹಿತಿ; ಸಂಜೀವ ಅಕ್ಕಿ, ಬಂದೇ ನವಾಜ್ ಥವಳಗಿಯವರ ಚಿತ್ರಗಳು ಹಾಗೂ ವಿಷ್ಣುಕುಮಾರ್ ವಿನ್ಯಾಸದಿಂದ ಆಕರ್ಷಕವಾಗಿ ಮೂಡಿಬಂದಿದೆ. ಕೋಚೆ ಸಂದರ್ಶನ(ಚ.ಹ.ರಘುನಾಥ, ಗುಡಿಹಳ್ಳಿ ನಾಗರಾಜ) ಚೆನ್ನಾಗಿ ಮೂಡಿಬಂದಿದ್ದು, ಸಂಗ್ರಹಯೋಗ್ಯವಾಗಿದೆ.

-ಸಂಜೀವ ಪಿ.ಗೌರ, ಹಾಸನ/ ಕೆ.ಎಸ್.ವಿಠಲರಾವ್, ಚೈತ್ರಾ ಕುಕ್ಕೆಮನೆ, ಕೋಟೇಶ್ವರ ಸೂರ್ಯನಾರಾಯಣ ರಾವ್, ಬೆಂಗಳೂರು/ ಎಂ.ಬಿ.ಕೃಷ್ಣಮೂರ್ತಿ, ಎಸ್.ಲಕ್ಷ್ಮೀನರಸಿಂಹ, ಚಾಮರಾಜನಗರ/ ಪಿ.ಗೋವಿಂದರಾಜ್, ಶಿವಮೊಗ್ಗ/ ಮೇ.ಗೋ.ಸುಬ್ಬಣ್ಣ, ಮೇಗರವಳ್ಳಿ/ ಎಚ್.ಆರ್.ದೇಸಾಯಿ, ರಾಯಚೂರು/ ಸು.ವಿಜಯಲಕ್ಷ್ಮಿ, ಶಿವಮೊಗ್ಗ/ ಪತ್ರೇಶಿ ಹಿರೇಮಠ, ಹಗರಿಬೊಮ್ಮನಹಳ್ಳಿ

### ಸೌಕರ್ಯ ಸುಧಾರಿಸಲಿ

ಪ್ರವಾಸಿಗರ ಮಾರ್ಗದರ್ಶಿಯಂತೆ ವಿಜಾಪುರ ಲೇಖನ ಮೂಡಿಬಂದಿದೆ. ವಿಜಾಪುರದಲ್ಲಿ ನೀರು, ನೆರಳಿನ ಸೌಕರ್ಯ ಇನ್ನೂ ಉತ್ತಮವಾಗಬೇಕು. ಎಲ್ಲ ಪ್ರವಾಸಿ ಸ್ಥಳಗಳನ್ನು ಸುಲಭವಾಗಿ ನೋಡಲು ಕಡಿಮೆ ದರದಲ್ಲಿ ನಗರ ಸಾರಿಗೆಯ ಬಸ್‌ಗಳನ್ನು ವ್ಯವಸ್ಥೆ ಮಾಡಬೇಕು.

-ಡಾ. ಕೆ.ಕೆ. ಜಯಚಂದ್ರ ಗುಪ್ತ, ಹಾಸನ/ ಡಾ. ಕೆ.ಸಿ. ಮರಿಯಪ್ಪ, ಹೊಳೆನರಸೀಪುರ

### ಮೊದಲು ಗಲಿಬಿಲಿ, ನಂತರ ಸಮಾಧಾನ

'ದಾನಶೂರ ದುರ್ಯೋಧನ!' ಎಂಬ ಶಿಕಾಕು ವಿಚಾರ ಲಹರಿಯ ಶೀರ್ಷಿಕೆ ನೋಡಿ ಗಲಿಬಿಲಿಯಾದರೂ, ಓದಿದ ನಂತರ ದಾನದ ಪ್ರಾಮುಖ್ಯ ಅರ್ಥವಾಯ್ತು.

-ಬಾಳ್ಳುಪೇಟೆ ನೀಲಕಂಠಪ್ಪ, ಹಾಸನ

### ಇಷ್ಟವಾದ ಸತಿ ದೇವರು

'ಸತಿ ದೇವರ ಮನೆಯಲ್ಲಿ' ಮಂಜುಳಾ ರಾಜ್ ಪ್ರವಾಸ ಲೇಖನ ಇಷ್ಟವಾಯಿತು.

-ಎಚ್.ಆನಂದಕುಮಾರ್, ಚಿತ್ರದುರ್ಗ/ ತರಂಗಿಣಿ, ತುಮಕೂರು

### ಕಲ್ಲಡ್ಕದ ಹೆಮ್ಮೆ

'ಗೊಂಬೆ ಮೋಡಿಗಾರ!' ಕಲ್ಲಡ್ಕದ ಹೆಸರನ್ನು ಎತ್ತಿಹಿಡಿದಿರುವುದನ್ನು ರಾಜೇಶ್ ಶ್ರೀವನ ಚಿತ್ರಿಸಿದ್ದಾರೆ.

-ನಿತ್ಯ ಎಸ್. ಮೂಡಬಿದಿರೆ

### ನಗೆಗಡಲಿನಲ್ಲಿ ತೇಲಿಸಿದ ಬರಹ

ಜಗಲೂರ್ ಎಂ.ವಿ.ಸ್ವಾಮಿಯವರ 'ಗುರ್‍ರೂಜಿಯವರ ಕೊಶ್ಶೆ ಕಾರ್ಯಕ್ರಮ' ನಗೆಗಡಲಿನಲ್ಲಿ ತೇಲಿಸಿತು.

-ಎ.ಪಿ.ರಂಗನಾಥ್, ಮೈಸೂರು

### ಮನೋಜ್ಞ ಕತೆ, ಒಪ್ಪಿದ ಚಿತ್ರ

ಜಾಗತೀಕರಣದ ಹೊಡೆತದಲ್ಲಿ ಹಳ್ಳಿಗಳೆಲ್ಲ ಹಾಳಾಗಿ ಅಲ್ಲಿ ಮೆರೆದ ಗೌಡರು ನಗರಕ್ಕೆ ಬಂದು ಕೊಳೆಗೇರಿಗಳಲ್ಲಿ ವಾಸಿಸುವುದನ್ನು ಡಾ.ಬಸು ಬೇವಿನಗಿಡದ ತಮ್ಮ 'ಅಮೃತ ಕಡೆವಲ್ಲಿ' ಕತೆಯಲ್ಲಿ ಮನೋಜ್ಞವಾಗಿ ಕಟ್ಟಿಕೊಟ್ಟಿದ್ದಾರೆ. ಕಣಕಾಲಮಠರ ಚಿತ್ರ ಔಚಿತ್ಯಪೂರ್ಣವಾಗಿದೆ.

-ಕೊಹಿಮ, ಬಸರಕೋಡು/ ಬಿ.ಎಸ್.ಮುಳ್ಳೂರ, ಹಲಗತ್ತಿ/ ರೇಣುಕಾ ಪಾಟೀಲ, ದಾವಣಗೆರೆ/ ಬಿ.ಎಸ್.ಹಾದಿಮನಿ, ಧಾರವಾಡ

### ಇಲ್ಲಿ ಕೇಳಿ! ಅಲ್ಲಿ ಬಿಡಿ!

'ಏನ್ ಜೀವನಾನೋ ಏನೋ...' ಬರಹದಲ್ಲಿ ಡಾ. ಜಯಲಕ್ಷ್ಮಿ ಅವರು ತಮ್ಮ ಸಂಕಟಗಳನ್ನು ಹೇಳಿಕೊಂಡಿದ್ದಾರೆ. ನಿಂದನೆಯನ್ನು ಅವರು ಒಂದು ಕಿವಿಯಲ್ಲಿ ಕೇಳಿ, ಮತ್ತೊಂದು ಕಿವಿಯಲ್ಲಿ ಬಿಟ್ಟುಬಿಡುವುದು ಲೇಸು.

-ನಾರಾಯಣ ಯಾಜಿ, ಶಿರಾಲಿ

### ರಾಮ್ ಉತ್ತರ ಸರಿಯಲ್ಲ!

'ನೀವು ಕೇಳಿದಿರಿ?' ವಿಭಾಗದಲ್ಲಿ ಕೆ.ಮೈಥಿಲಿ ಕೃಷ್ಣ ಅವರು ನಿಮ್ಮ ನೆಚ್ಚಿನ ಭಾಷೆ ಇಂಗ್ಲಿಷೋ, ಕನ್ನಡವೋ ಎಂದು ಕೇಳಿರುವುದಕ್ಕೆ ರಾಮ್ ಹಲವು ಭಾಷೆ ತಮಗೆ ಮೆಚ್ಚುಗೆ ಎಂದಿದ್ದಾರೆ. ಈ ಉತ್ತರ ಸರಿಯಲ್ಲ. ಬೇರೆ ಭಾಷೆಯ ಜನ ಇದೇ ಉದಾರತೆ ತೋರಿಸುವುದಿಲ್ಲ. ತಮ್ಮ ಮಾತೃಭಾಷೆಯನ್ನು ಮಾತ್ರ ಹೊಗಳಿಕೊಳ್ಳುತ್ತಾರೆ!

-ರಾಜೇಂದ್ರ ಹೆಗಡೆ, ಹಾವೇರಿ

